**ಓ ಎಸ್ ನಂಃ 11-2015**

**ಡಿ. ಡಬ್ಲ್ಯೂ ಃ 1**

**ದಿಃ 05-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ 3 ರಿಂದ 5 ನೇ ಪ್ರತಿವಾದಿ ಪರ ಶ್ರೀ ಎನ್.ಆರ್.ಎಸ್ ವಕೀಲರಿಂದ**

ದಾವಾ ಸ್ವತ್ತಿನಲ್ಲಿ ನಮಗೂ ಭಾಗ ಬೇಕು ಎಂದು ಪರಿಹಾರ ಕೇಳಿದ್ದೇವೆ. ದಾವೆ ಹಾಕಲು ಮಾಹಿತಿಯನ್ನು ನನ್ನ ಅಣ್ಣ ಧನಂಜಯ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನೇ ಕೊಟ್ಟಿದ್ದೇನೆ. ನನ್ನ ತಂದೆ ಆಂಜನಪ್ಪ ಇವರಿಗೆ ಇಬ್ಬರು ಹೆಂಡತಿಯರು. ಚೌಡಮ್ಮ ಮತ್ತು ಜಯಮ್ಮ ಆಗಿರುತ್ತಾರೆ. ಚೌಡಮ್ಮನಿಗೆ ಜಯರಾಮ ಮತ್ತು ಗೌರಮ್ಮ ಎಂಬ ಇಬ್ಬರು ಮಕ್ಕಳಿರುತ್ತಾರೆ. ಜಯಮ್ಮನಿಗೆ ಚೌಡಮ್ಮ, ಧನಂಜಯ, ಹೇಮಾವತಿ, ಸರಸ್ವತಿ, ಲೀಲಾವತಿ ಮತ್ತು ಸುಮಿತ್ರ ಇರುತ್ತಾರೆ. ಗೌರಮ್ಮ ಇವರನ್ನು ಈ ಕೇಸ್ ನಲ್ಲಿ ಪಾರ್ಟಿ ಮಾಡಿಲ್ಲ. ಗೌರಮ್ಮ ಇವರಿಗೆ ಮದುವೆ ಆಗಿತ್ತು. ಅವರ ಗಂಡನ ಹೆಸರು ಚೊಕ್ಕಪ್ಪ. ಅವರಿಗೆ 6 ಜನ ಮಕ್ಕಳಿರಬಹುದು ಎಂದು ಸಾಕ್ಷಿ ಹೇಳುತ್ತಾರೆ. ಅವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ. ನಮ್ಮ ತಂದೆ ದಿನಾಂಕ ಃ 16.10.1982 ರಲ್ಲಿ ತೀರಿಕೊಂಡಿದ್ದಾರೆ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ಮತ್ತು ಮೊದಲನೆ ಹೆಂಡತಿ ಮಗ ಜಯರಾಮ್ ಇವರ ಮಧ್ಯೆ ಬಾಯಿಮಾತಿನ ವಿಭಾಗವಾಗಿತ್ತು ಎಂದರೆ ಸರಿಯಲ್ಲ. ಆ ಪ್ರಕಾರ ಎಂ ಆರ್ 11/1983-84 ಇದು ಸ್ವೀಕಾರವಾಗಿತ್ತು ಎಂದರೆ ಸರಿಯಲ್ಲ. ಈ ವಿಚಾರವನ್ನು ನನ್ನ ವಾದಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿ. ಜಯರಾಮು ದಿನಾಂಕ ಃ 19.11.1991 ರಂದು ಮೃತಪಟ್ಟಿದ್ದಾರೆ.ಜಯರಾಮು ಇವರು ತೀರಿಕೊಂಡ ನಂತರ ಅವರ ಹೆಂಡತಿ ಜಯಲಕ್ಷ್ಮಮ್ಮ, ಮಕ್ಕಳಾದ ಮಂಜುನಾಥ್ ಮತ್ತು ರವಿಕುಮಾರ್ ಹಾಗೂ ನಮ್ಮ ತಾಯಿಯ ಮಧ್ಯೆ ಎಂ ಆರ್ 11/1991-92 ರಂತೆ ವಿಬಾಗವಾಗಿತ್ತು ಎಂದರೆ ಸರಿಯಲ್ಲ. ಈ ವಿಷಯವನ್ನು ನನ್ನ ವಾದಪತ್ರದಲ್ಲಿ ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ್ದರೂ ಸತ್ಯಾಂಶ ಗೊತ್ತಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ ಃ 12.12.1994 ರಂದು ನನ್ನ ತಾಯಿ ಜಯಮ್ಮ, ನಮ್ಮ ಅಕ್ಕ ಹೇಮಾವತಿ, ನಮ್ಮಅಣ್ಣ ಧನಂಜಯ ಹಾಗೂ ಇತರರು ಸೇರಿ ಒಂದು ವಿಭಾಗ ಪತ್ರ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ಆ ವಿಭಾಗಪತ್ರದಲ್ಲಿ ಎಂ ಆರ್ 11/1983-84 ಹಾಗೂ ಎಂ ಆರ್ 11/1993-94 ಇವುಗಳ ಪ್ರಕಾರ ಆಸ್ತಿಯನ್ನು ವಿಭಾಗ ಮಾಡಿಕೊಂಡಿದ್ದೇವೆ ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ಆಗ ದಾಖಲಾತಿ ಇಲ್ಲದ ಕಾರಣ ದಾಖಲಾತಿಗೋಸ್ಕರ ದಿನಾಂಕ ಃ 12.12.1994 ರಂದು ಲಿಖಿತ ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ವಿಭಾಗಪತ್ರಕ್ಕೆ ಹೇಮಾವತಿ, ಸರಸ್ವತಿ, ಚೌಡಮ್ಮ , ಧನಂಜಯ,

ಜಯಲಕ್ಷ್ಮಿ ಹಾಗೂ ನನ್ನ ತಾಯಿ ಜಯಮ್ಮ ಇವರು ನನ್ನ ಪರವಾಗಿ ಹಾಗೂ ನನ್ನ ಅಕ್ಕನ ಪರವಾಗಿ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ಮಾಡಿರುವ ಸಹಿ ಮತ್ತು ವಿಭಾಗ ಪತ್ರದಲ್ಲಿರುವ ಸಹಿ ಒಂದೇ ರೀತಿ ಇರುತ್ತವೆ ಎಂದರೆ ಸರಿಯಲ್ಲ. ಇದ್ದರೂ ಸಹ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪ್ರಕಾರ ಷೆಡ್ಯೂಲ್ ಎ ಸ್ವತ್ತು ಜಯಲಕ್ಷ್ಮಿ ಇವರ ಭಾಗಕ್ಕೆ ಹೋಗಿತ್ತು ಎಂದರೆ ಸರಿಯಲ್ಲ. ಷೆಡ್ಯೂಲ್ ಬಿ ಸ್ವತ್ತು ನಮ್ಮ ತಾಯಿಗೆ ಹಾಗೂ ಅಕ್ಕ ತಂಗಿಯರಿಗೆ ಬಂದಿತ್ತು ಎಂದರೆ ಸರಿಯಲ್ಲ. ಆ ರೀತಿ ವಿಭಾಗವಾಗಿರುವುದು ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೌಡಮ್ಮ ಇವರ ಮಗಳು ಗೌರಮ್ಮ ದಾವಾ ಸ್ವತ್ತಿನಲ್ಲಿ ಭಾಗ ಬೇಕೆಂದು ದಾವೆ ಮಾಡಿದ್ದರು ಎಂದರೆ ಸರಿ. ಅದು ಓ. ಎಸ್ 171/2008 ಎಂದು ಇತ್ತು ಎಂದರೆ ಸರಿ. ಅದರ ಹೊಸ ನಂಬರ್ ಓ ಎಸ್ 140/2014 ಎಂದರೆ ಸರಿ. ಆ ದಾವೆಯನ್ನು ಗೌರಮ್ಮ ಇವರು ವಜಾ ಮಾಡಿಕೊಂಡರು ಎಂದರೆ ಸರಿ. ಈ ಹಿಂದೆಯೆ ಸ್ವತ್ತಿನಲ್ಲಿ ವಿಭಾಗವಾಗಿದೆ ಎಂದು ಮೆಮೋ ಸಲ್ಲಿಸಿ ವಜಾ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ದಿನಾಂಕ : 26.9.2014 ರಲ್ಲಿ ಕೋರ್ಟ್‌ನಲ್ಲಿ ಬಂದಿದ್ದಕ್ಕೆ ಸಹಿ ಮಾಡಿಸಿಕೊಂಡಿದ್ದಾರೆ. ಆದರೆ ಈ ಹಿಂದೆಯೇ ವಿಭಾಗ ಆಗಿದೆ ಎಂದು ಒಪ್ಪಿ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಓ ಎಸ್ 171/2008 ರಲ್ಲಿನ ಆದೇಶವನ್ನು ಪ್ರಶ್ನಿಸಿ ಅಪೀಲು ಮಾಡಿಲ್ಲ. ಅದಕ್ಕೆ ನಮ್ಮ ಸಂಪೂರ್ಣ ಸಮ್ಮತಿ ಇದ್ದುದ್ದರಿಂದ ನಾವು ಅದನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ನಾವು ಎಂ ಆರ್ 11/1983-84 ನ್ನು ಪ್ರಶ್ನಿಸಿಲ್ಲ ಎಂದರೆ ಸರಿ. ಎಂ ಆರ್ 11/1992-93 ಇದನ್ನು ನಾವು ಪ್ರಶ್ನೆ ಮಾಡಿದ್ದೇವು. ಆಂಜನಪ್ಪ ಇವರು ತೀರಿಕೊಂಡ ನಂತರ ಜಯರಾಮು ಇವರ ಕುಟುಂಬ ಹಾಗೂ ನಮ್ಮ ತಾಯಿ ಬೇರೆ ಬೇರೆಯಾಗಿ ವಾಸವಾಗಿದ್ದರು ಎಂದರೆ ಸರಿಯಲ್ಲ. ನಾವು ಒಟ್ಟು ಕುಟುಂಬದಲ್ಲಿ ವಾಸವಿದ್ದ ಬಗ್ಗೆ ದಾಖಲೆ ಕೊಟ್ಟಿಲ್ಲ. ಮತದಾರರ ಪಟ್ಟಿಯಲ್ಲಿ ಒಂದೇ ಕುಟುಂಬದಲ್ಲಿ ವಾಸವಿದ್ದ ಬಗ್ಗೆ ದಾಖಲೆ ಕೊಟ್ಟಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.